# ಪ್ರೇಮಕಿರಣದ
## ಮೇಲಿನ ಪಯಣ

ಪ್ರಿಯ ಸ್ನೇಹಿತರೆ,

1940 ರ ದಶಕದಲ್ಲಿ ಬಾಬೂಜಿ ಮಹಾರಾಜರು ಬರೆದ ಪುಸ್ತಕ ಸರಣಿಯಲ್ಲಿ ಅವರು, ಕೇಂದ್ರದೆಡೆಗೆ ಮಾನವನ ಆಂತರಿಕ ಪಯಣವನ್ನು ವಿವರಿಸಿದ್ದಾರೆ. ಕೇಂದ್ರವೆಂದರೆ, ವಿಶ್ವದ ಹುಟ್ಟಿಗೂ ಮೊದಲಿನ ಪರಿಪೂರ್ಣ ಸ್ಥಿತಿ, ಸಮಸ್ತ ವಸ್ತುಗಳ ಸೃಷ್ಟಿಮೂಲ. ಆ ಪಥದಲ್ಲಿನ ಅಡೆತಡೆಗಳನ್ನು ವಿವರಿಸಿದ್ದಾರಲ್ಲದೆ, ಆ ಅಡೆತಡೆಗಳಿಗೆ ಪರಿಹಾರಗಳನ್ನೂ ನೀಡಿದ್ದಾರೆ. ಅದಕ್ಕಿಂತಲೂ ಅದ್ಭುತವಾದ ವಿಷಯವೆಂದರೆ ಅದೆಷ್ಟು ಸರಳವೆಂಬ ಸತ್ಯವನ್ನು ಹೇಳಿದುದು. ಅವರು ಉಚಿತವಾಗಿ ಪರಿಹಾರಗಳನ್ನು ನೀಡಿದರು, ತಮ್ಮನ್ನು ತಾವು ಮಾರ್ಗದರ್ಶಿಯಾಗಿ ಅರ್ಪಿಸಿಕೊಂಡರು ಹಾಗು ಈ ಯಾತ್ರೆಯನ್ನು ನಮಗೆ ಅರ್ಥಮಾಡಿಸಲು ಸರಳವಾದ ಚಿತ್ರಗಳನ್ನು ಬಳಸಿದರು. ಅತಿ ಗಹನವಾದ, ನಿಗೂಢ ಜ್ಞಾನಸಂಪತ್ತು ಇದ್ದಕ್ಕಿದ್ದಂತೆ ಇಡೀ ಜಗತ್ತಿಗೇ ಲಭ್ಯವಾಯಿತು. ತಮ್ಮ ಬಳಿ ಬಂದ ಎಲ್ಲ ಸಂಸ್ಕೃತಿಯ, ವಯೋಮಾನದ ಮತ್ತು ಹಿನ್ನೆಲೆಯ ಜನರನ್ನೂ ಯಾವುದೇ ಭೇದಭಾವವಿಲ್ಲದೆ ಬಾಬೂಜಿಯವರು ಸ್ವಾಗತಿಸಿದರು. ನಾವೆಲ್ಲರೂ ಕೇಂದ್ರದೆಡೆಗೆ ಪ್ರೇಮಪಥದಲ್ಲಿ ಮುನ್ನಡೆದು, ಮಾನವರಾಗಿ ನಮ್ಮ ಅತ್ಯುನ್ನತ ಅಂತಃಸಾಮರ್ಥ್ಯವನ್ನು ಶೋಧಿಸಬೇಕೆಂಬುದೇ ಅವರ ಕನಸಾಗಿತ್ತು. ಅವರು ಯಾತ್ರೆಯ ವೈಜ್ಞಾನಿಕ ವಿವರಣೆ ನೀಡುತ್ತ, ತಮ್ಮ ವೈಯಕ್ತಿಕ ಅನುಭವದ ಆಧಾರದ ಮೇಲೆ ನಮಗೆ ಮಾರ್ಗದರ್ಶನ ನೀಡಿದರು. ಅವರ ಚಿತ್ರಗಳು ಹಾಗು ಸೂಚನೆಗಳು ನಿಖರ, ಸ್ಪಷ್ಟ ಹಾಗು ಸರಳವಾಗಿದ್ದುವು.

ಅವುಗಳಲ್ಲೊಂದು ಚಿತ್ರದಲ್ಲಿ 23 ವೃತ್ತಗಳನ್ನು, ಅಂದರೆ ಕೇಂದ್ರದೆಡೆಗಿನ ನಮ್ಮ ಆಂತರಿಕ ಹಾದಿಯಲ್ಲಿ ನಾವು ಹಾದುಹೋಗುವ ಅನೇಕ ಹಂತಗಳು ಅಥವಾ ಸ್ತರಗಳನ್ನು ತೋರಿಸಲಾಗಿದೆ. ನಾವು ಪರಿಧಿಯ ಹೊರಭಾಗದಿಂದ ಆರಂಭಿಸಿ, ನಮ್ಮ ಸೂಕ್ಷ್ಮ ಶರೀರದ ರಚನೆಯನ್ನು ನಿರೂಪಿಸುವ ಚಕ್ರಗಳ ಮೂಲಕ ಸಾಗುತ್ತೇವೆ. ಈ ಚಕ್ರಗಳು ಕಂಡುಬರುವ ಮೂರು ಕ್ಷೇತ್ರಗಳನ್ನೂ ಬಾಬೂಜಿಯವರು ವಿವರಿಸುತ್ತಾರೆ ಹೃದಯ ಮಂಡಲ, ಮನೋ ಮಂಡಲ ಮತ್ತು ಕೇಂದ್ರ ಮಂಡಲ. ಕೇಂದ್ರದೆಡೆಗಿನ ಹಾದಿಯಲ್ಲಿ ಕಂಡುಬರುವ ಎಲ್ಲ ಹಂತಗಳಿವು. ನಿಮಗೆ ಬಾಬೂಜಿಯವರ ವಿವರಣೆಗಳ ಪರಿಚಯವಿಲ್ಲದಿದ್ದಲ್ಲಿ, ಈ ವಿಷಯದ ಬಗ್ಗೆ ಅವರು ಬರೆದ, 'ಸತ್ಯೋದಯ', 'ಸಹಜಮಾರ್ಗಾನುಸಾರ ರಾಜಯೋಗದ ಪ್ರಭಾವ' ಮತ್ತು 'ಅನಂತದೆಡೆಗೆ' ಪುಸ್ತಕಗಳನ್ನು ಓದಬಹುದು. ನೀವು ಸ್ವತಃ ಈ ಪಯಣದ ಅನುಭವ ಪಡೆದರೆ ಮತ್ತೂ ಒಳ್ಳೆಯದು. ಪ್ರಪಂಚದ ನಕ್ಷೆಯ ಮೇಲಿರುವ ಅಕ್ಷಾಂಶ-ರೇಖಾಂಶಗಳಂತೆಯೆ, ಈ 23 ವೃತ್ತಗಳು ವಾಸ್ತವವಾಗಿ ಅಸ್ತಿತ್ವದಲ್ಲೇನೂ ಇಲ್ಲ. ಅವು ಕೇವಲ ಸೂಚೀಚಿಹ್ನೆಗಳಷ್ಟೆ.



ನಾವು ಈ ಆಂತರಿಕ ಯಾತ್ರೆಯಲ್ಲಿ ವೇಗವಾಗಿ ಮುನ್ನುಗ್ಗುವುದಾದರೂ ಹೇಗೆ? ನಮ್ಮನ್ನು ಪ್ರೇಮಕಿರಣದ ಮೇಲೆ ಸಾಗಿಸಲಾಗುತ್ತದೆ. ಆದರೆ ಹಾದಿಯಲ್ಲಿ ಅಡೆತಡೆಗಳಿವೆ. ಆ ಅಡೆತಡೆಗಳು ಯಾವುವು? ಅವುಗಳನ್ನು ನಿವಾರಿಸುವುದು ಹೇಗೆ?

ಅತಿ ಪಾರದರ್ಶಕ ಗಾಜಿನ ಮೂಲಕ ಹಾದುಹೋಗುವಾಗಲೂ ಬೆಳಕಿನ ಕಿರಣ ಬಾಗಿ, ದೃಶ್ಯವನ್ನು ವಿಕೃತಗೊಳಿಸುವಂತೆ, ಪ್ರೇಮಕಿರಣವೂ ಸಹ ಅತಿ ಸೂಕ್ಷ್ಮ ಶೋಧಕದಿಂದಲೂ ದಿಕ್ಚ್ಯುತಿಗೊಳ್ಳುತ್ತದೆ. ಯಾವ ಶೋಧಕವೂ ಇಲ್ಲದಿದ್ದರೆ, ಕೇಂದ್ರದಿಂದ ನೇರವಾಗಿ ಪ್ರವಹಿಸುವ ಪ್ರೇಮವನ್ನು ನಾವೆಲ್ಲರೂ ಅನುಭವಿಸುತ್ತಿದ್ದೆವು; ಆಗ ನಮಗೆ ಈ ಆಂತರಿಕ ಯಾತ್ರೆಯ ಅಗತ್ಯವೇ ಇರುತ್ತಿರಲಿಲ್ಲ. ಆದರೆ ನಮ್ಮ ಮಾನವ ಅಸ್ತಿತ್ವದ ಸ್ವಭಾವವೇನೆಂದರೆ ನಮ್ಮಲ್ಲಿ ಶೋಧಕಗಳಿವೆ; ತತ್ಪರಿಣಾಮವಾಗಿ ಕೇಂದ್ರದೆಡೆಗೆ ಸಾಗುತ್ತಿದ್ದಂತೆ ನಮ್ಮ ಸಾಮರ್ಥ್ಯ ಮತ್ತು ಅಂತಃಶಕ್ತಿಯನ್ನು ವಿಸ್ತರಿಸುತ್ತ, ನಾವು ಈ 23 ವೃತ್ತಗಳ ಮೂಲಕವೂ ಹಂತಹಂತವಾಗಿ ಪಯಣಿಸಬೇಕಾಗಿದೆ.

ಪ್ರೇಮಕಿರಣವೂ ಸಹ ಅತಿ ಸೂಕ್ಷ್ಮ ಶೋಧಕದಿಂದಲೂ ದಿಕ್ಚ್ಯುತಿಗೊಳ್ಳುತ್ತದೆ. ಯಾವ ಶೋಧಕವೂ ಇಲ್ಲದಿದ್ದರೆ, ಕೇಂದ್ರದಿಂದ ನೇರವಾಗಿ ಪ್ರವಹಿಸುವ ಪ್ರೇಮವನ್ನು ನಾವೆಲ್ಲರೂ ಅನುಭವಿಸುತ್ತಿದ್ದೆವು;



ಪರಿಧಿ ಮತ್ತು ಕೇಂದ್ರದ ನಡುವೆ ಅನೇಕ ಶೋಧಕಗಳಿವೆ. ಹೊರಭಾಗದಲ್ಲಿ ನಮ್ಮ ಪ್ರೇಮವು ಬಹಿರ್ಮುಖಿಯಾಗಿದ್ದು, ನಮ್ಮ ಇಚ್ಛೆಗಳ ಎಳೆತ–ಸೆಳೆತಗಳನ್ನು ಪೂರೈಸಿಕೊಳ್ಳುತ್ತದೆ. ಉದಾಹರಣೆಗೆ, ಮಗುವಿನ ಪ್ರೇಮವನ್ನು ಪಾಲಕರು ಹಾಗು ಆಟದ ಸಾಮಾನುಗಳು ಸೆಳೆಯುತ್ತವೆ; ಹದಿಹರೆಯದವರನ್ನು ಅನುರಾಗ, ಸ್ನೇಹಗಳು ಸೆಳೆಯುತ್ತವೆ; ವಯಸ್ಕರನ್ನು ಕೌಟುಂಬಿಕ ಜೀವನ, ವೃತ್ತಿ, ಕ್ರೀಡೆಗಳು, ಹವ್ಯಾಸಗಳು, ಆಸ್ತಿಪಾಸ್ತಿ ಮತ್ತು ಡಿಜಿಟಲ್ ಉಪಕರಣಗಳು ಸೆಳೆಯುತ್ತವೆ. ಕೆಲವೊಮ್ಮೆ ದುರಾಸೆ, ಅಸೂಯೆ, ಮತ್ಸರ, ಸ್ಪರ್ಧೆ ಮತ್ತು ಕ್ರೋಧದ ಮೇಲುಗೈಯಾಗುತ್ತದೆ. ಆಗ ಪ್ರೇಮವು ಸ್ವಾಮ್ಯಪ್ರವೃತ್ತಿ ಹೊಂದಿ, ಸ್ವಕೇಂದ್ರಿತವಾಗುತ್ತದೆ. ಹೀಗಾದಾಗ, ಬಾಹ್ಯಾಕಾಶದ ಕಪ್ಪುರಂಧ್ರಗಳಿಂದ ತಪ್ಪಿಸಿಕೊಳ್ಳಲಾಗದ ಬೆಳಕಿನ ಕಿರಣದಂತೆಯೆ, ನಮ್ಮ ಪ್ರೇಮ ಬಂದಿಯಾಗುತ್ತದೆ. ಕ್ರಮೇಣ, ನಮ್ಮ ಅಭ್ಯಾಸದ ಮೂಲಕ, ನಾವು ಈ ಭಾವನಾತ್ಮಕ ಏರಿಳಿತಗಳ ಮೇಲೆ ಹತೋಟಿ ಸಾಧಿಸಿ, ಉತ್ತಮ ತಿಳಿವಳಿಕೆ ಮತ್ತು ಯುಕ್ತ ಆಲೋಚನೆಗಳಿಂದ ಉನ್ನತ ದೃಷ್ಟಿಕೋನದ ಮೇಲೆ ಗಮನವಿಡಲು ಕಲಿಯುತ್ತೇವೆ. ನಾವು ನಮ್ಮ ಕುಟುಂಬ, ಕೆಲಸಗಳನ್ನು ಪ್ರೀತಿಸುವುದರ ಜೊತೆಜೊತೆಗೆ, ಉನ್ನತ ಅರಿವನ್ನು ಬೆಳೆಸಿಕೊಳ್ಳುತ್ತೇವೆ. ಭಾವೋದ್ವೇಗಗಳ ಮೇಲಿನ ನಿಯಂತ್ರಣ ನಮ್ಮನ್ನು ಮೊದಲ ಹಂತಕ್ಕೆ ತಲುಪಿಸುತ್ತದೆ. ನಂತರ, ಹಾದಿಯಲ್ಲಿ ಮುಂದುವರೆದಂತೆ ಅನೇಕ ಘಟ್ಟಗಳಲ್ಲಿ ನಮ್ಮನ್ನು ನಾವೇ ಎದುರಿಸಬೇಕಾಗುತ್ತದೆ.

ನಾವು ನಮ್ಮ ಯಾತ್ರೆಯನ್ನು ಹೃದಯದಲ್ಲಿ, ಹೃದಯ ಮಂಡಲದ ಐದು ವೃತ್ತಗಳೊಂದಿಗೆ ಪ್ರಾರಂಭಿಸುತ್ತೇವೆ. ಪ್ರತಿಯೊಂದು ಘಟ್ಟದಲ್ಲೂ ಒಂದೊಂದು ಭಾವನಾತ್ಮಕ ಶೋಧಕವಿದೆ, ಅದರಲ್ಲಿ ನಮ್ಮ ಇಚ್ಛೆ ಮೊದಲಿನದು. ನಮ್ಮಲ್ಲಿ ಹಂತಹಂತವಾಗಿ ಉಂಟಾಗುವ ಪರಿವರ್ತನೆ, ಈ ಶೋಧಕಗಳನ್ನು ಬಿಟ್ಟುಕೊಡುವುದರಿಂದಲೇ ಆಗುವಂತಹುದು.

ನಮ್ಮ ಅನುಭವಕ್ಕೆ ಬರುವ ಶೋಧಕಗಳು, ನಿಜವಾಗಲೂ ನಮಗೆ ಚೆನ್ನಾಗಿ ತಿಳಿದ ವಿಷಯಗಳೇ ಆಗಿರುತ್ತವೆ. ಉದಾಹರಣೆಗೆ, ಸಂಗಾತಿ ಅಥವಾ ಜೊತೆಗಾರ/ರ್ತಿಯೊಂದಿಗಿನ ಸಂಬಂಧದಲ್ಲಿ ನಾವು ಸಾಮಾನ್ಯವಾಗಿ ಪರಸ್ಪರರನ್ನು ಬಂದಿಗಳನ್ನಾಗಿಸುತ್ತೇವೆ. ನೂರಾರು ದಂಪತಿಗಳಲ್ಲಿ ನೈಜ ಪ್ರೇಮದಲ್ಲಿ ಮಿಂದವರು ಅಪರೂಪಕ್ಕೆ ಮೂವರೊ, ನಾಲ್ವರೊ ಇರಬಹುದು. ಬಹುತೇಕರು ಸ್ವಾಮ್ಯಪ್ರವೃತ್ತಿಯವರು. ಉಳಿದ ಶೋಧಕಗಳಲ್ಲಿ, ನಮ್ಮ ಧಾರ್ಮಿಕ ನಂಬಿಕೆಗಳಂತಹ ನಂಬಿಕೆಯ ವ್ಯವಸ್ಥೆಗಳು ಸೇರಿವೆ. ಅವು, ಧಾರ್ಮಿಕ, ರಾಜಕೀಯ ಅಥವಾ ಆದರ್ಶಗಳಲ್ಲಿ ಭಿನ್ನ ನಂಬಿಕೆಯುಳ್ಳವರ ಬಗ್ಗೆ ಪೂರ್ವಗ್ರಹಕ್ಕೆಡೆ ಮಾಡಿಕೊಡುತ್ತವೆ. ನಂತರ ಬರುವುದು, ನಮ್ಮ ಅಚ್ಚುಮೆಚ್ಚಿನ ತತ್ತ್ವಗಳು. ಉದಾಹರಣೆಗೆ, ಪ್ರಾಮಾಣಿಕತೆ ಮತ್ತು ನ್ಯಾಯದ ಅಗತ್ಯ. ಇವುಗಳಲ್ಲಿ ಬಹಳಷ್ಟು ತತ್ತ್ವಗಳು ಉದಾತ್ತವಾಗಿದ್ದರೂ ಸಹ, ನಾವು ನಮ್ಮ ಒಲವುಗಳ ಬಗ್ಗೆ ಅಂಧವಿಶ್ವಾಸವನ್ನಿಟ್ಟುಕೊಂಡರೆ, ಕ್ಷಮೆ ನೀಡಿ, ಬಿಟ್ಟುಕೊಡಲಾರೆವು. ಬದಲಾಗಿ, ನಾವು ಸರಿಯೆಂದು ತಿಳಿದಿರುವುದರ ಪರವಾಗಿ ಹೋರಾಟ ಮಾಡುತ್ತಲೇ ಇರುತ್ತೇವೆ. ಇದರಿಂದ ವಿಕೃತಿಯುಂಟಾಗಿ, ನಾವು ಜನರನ್ನು ದ್ವೇಷಿಸಲೂಬಹುದು; ಅದು ಪ್ರೇಮಕಿರಣವನ್ನು ಕೇಂದ್ರದೆಡೆಗಿನ ಮಾರ್ಗದಿಂದ ವಿಪಥಗೊಳಿಸುತ್ತದೆ.

ನಾವು ನಮ್ಮ ಯಾತ್ರೆಯನ್ನು ಹೃದಯದಲ್ಲಿ, ಹೃದಯ ಮಂಡಲದ ಐದು ವೃತ್ತಗಳೊಂದಿಗೆ ಪ್ರಾರಂಭಿಸುತ್ತೇವೆ. ಪ್ರತಿಯೊಂದು ಘಟ್ಟದಲ್ಲೂ ಒಂದೊಂದು ಭಾವನಾತ್ಮಕ ಶೋಧಕವಿದೆ, ಅದರಲ್ಲಿ ನಮ್ಮ ಇಚ್ಛೆ ಮೊದಲಿನದು. ನಮ್ಮಲ್ಲಿ ಹಂತಹಂತವಾಗಿ ಉಂಟಾಗುವ ಪರಿವರ್ತನೆ, ಈ ಶೋಧಕಗಳನ್ನು ಬಿಟ್ಟುಕೊಡುವುದರಿಂದಲೇ ಆಗುವಂತಹುದು.

ಇದಕ್ಕೆ ಸುಪ್ರಸಿದ್ಧ ಉದಾಹರಣೆಯೆಂದರೆ, 'ಸ್ಟಾರ್ ವಾರ್ಸ್'ನ ಅನಕಿನ್ ಸ್ಕೈವಾಕರ್. 'ಫೋರ್ಸ್'ನ (ಪರಮಶಕ್ತಿ) ಸಮತೋಲನವನ್ನು ಪುನರ್‌ನಿರ್ಮಿಸುವ ಆಯ್ದ ಜೆಡೈಗಳಲ್ಲಿ ಒಬ್ಬನಾಗುವ ಸಾಮರ್ಥ್ಯ ಅನಕಿನ್‌ನಲ್ಲಿತ್ತು, ಅವನು ವಾತ್ಸಲ್ಯಮಯಿಯಾದ ಸಹೃದಯಿ ಯುವಕನಾಗಿದ್ದ. ಆದರೆ ಆತ ತನ್ನ ಪ್ರೀತಿಯ ತಾಯಿಯ ಹಾಗು ಪ್ರಿಯತಮೆ ಪಡ್ಮೆಯ ಸಾವಿನ ಕಾರಣದಿಂದ, ತೀವ್ರ ಕ್ರೋಧವನ್ನು ಬೆಳೆಸಿಕೊಂಡು, ಕೊನೆಯಲ್ಲಿ ಡಾರ್ಥ್ ವೇಡರ್ ಆಗಿ ಪರಿವರ್ತನೆ ಹೊಂದಿದ.

ಅಹಂಕಾರವು ಅಸ್ತಿತ್ವದ ಕರಾಳ ಮುಖವಾಗಿದೆ. ನಮ್ಮ ಅಸ್ತಿತ್ವದ ಕೇಂದ್ರದಲ್ಲಿರುವ ಪ್ರಕಾಶದ ಮೂಲದಿಂದ ನಾವು ಎಷ್ಟು ದೂರ ಇರುವೆವೊ, ಕಪ್ಪು ನೆರಳು ಅಷ್ಟೇ ನೀಳವಾಗಿ ಕಾಣುತ್ತದೆ. ಅಹಂಕಾರದಿಂದ ಯಾವುದಕ್ಕೆ ಸಮಾಧಾನ? ಯಾರಿಗೆ ತೃಪ್ತಿ? ಇತರರ ಬಲವಾದ ವಿರೋಧದ ನಡುವೆ ಯಾರಾದರೂ ನಮ್ಮ ಅನಿಸಿಕೆಯನ್ನು ಒಪ್ಪಿದಲ್ಲಿ ಅವರು ನಮ್ಮ ಖಾಸಾ ಸ್ನೇಹಿತರಾಗಿಬಿಡುತ್ತಾರೆ! ಏಕೆ? ಮತ್ತೊಂದು ಕಡೆ,

ನಮ್ಮ ಅತ್ಯಂತ ಸಮೀಪವರ್ತಿಗಳು ನಮ್ಮನ್ನು ಬಲವಾಗಿ ವಿರೋಧಿಸಿದಾಗ, ಸಾಮಾನ್ಯವಾಗಿ ನಾವು ನಮ್ಮ ಸಮತೋಲನವನ್ನು ಕಳೆದುಕೊಳ್ಳುತ್ತೇವೆ.

ಅಹಂಕಾರಕ್ಕಿಂತ ಇಚ್ಛೆಗಳನ್ನು ನಿರ್ವಹಿಸುವುದು ಸುಲಭ, ಏಕೆಂದರೆ ತೃಪ್ತವಾದ ನಂತರ ಅವು ಪುನಃ ತಲೆಯೆತ್ತುವುದಿಲ್ಲ. ಅವು ಪುನರಾವರ್ತಿಸಬಹುದು, ಆದರೆ ಅಂತರ ಅಧಿಕವಾಗಿರುತ್ತದೆ. ಜೊತೆಗೆ, ಆಹಾರಾಸಕ್ತಿ ಮತ್ತು ಇತರ ಇಂದ್ರಿಯ ಬಯಕೆಗಳ ಪೂರೈಕೆ ಬಹುಮಟ್ಟಿಗೆ ಸಹಜವಾಗಿರುತ್ತದೆ. ಅಹಂಕಾರವೆಂಬುದು ಬಿಡುವಿಲ್ಲದ ಅಖಂಡಧಾರೆ. ಅಹಂಕಾರವು ಅಧಿಕಾರ ಮತ್ತು ಶಕ್ತಿಗಳಿಂದಷ್ಟೇ ಅಲ್ಲದೆ, ತನ್ನ ಉಳಿವನ್ನು ಬೆಂಬಲಿಸುವ ಯಾವುದರಿಂದಲಾದರೂ ವರ್ಧಿಸುತ್ತದೆ. ಈ ಗುಣವೇ ನಮ್ಮನ್ನು ಉಳಿದ ಪ್ರಾಣಿಸಂಕುಲದಿಂದ ಪ್ರತ್ಯೇಕಗೊಳಿಸುವುದು. ಯಾವುದು ನಮ್ಮ ಪ್ರಗತಿಗಾಗಿ ಇರುವುದೊ, ಅದೇ ನಮ್ಮ ಪ್ರಜ್ಞೆಯ ವಿಸ್ತರಣೆಗೆ ಬಾಧಕವಾಗುತ್ತದೆ.

ಇಂತಹ ಅವನತಿಯ ಅಪಾಯ ಪ್ರಾಣಿಗಳಲ್ಲಿ ಅಥವಾ ಮರಗಳಲ್ಲಿ ಇರುವುದಿಲ್ಲವಾದರೂ ಅವುಗಳಲ್ಲಿ ಪ್ರಜ್ಞೆಯ ವಿಕಸನದ ಲಾಭವೂ ಇರುವುದಿಲ್ಲ. ಗಿಡಗಳು ಮತ್ತು ಪ್ರಾಣಿಗಳಲ್ಲಿ ಅಹಂಕಾರ ಇಲ್ಲವಾದರೂ, ಅವುಗಳಂತೆ ವರ್ತಿಸುವುದರಿಂದ ನಮಗೆ ಪ್ರಗತಿ ದೊರೆಯುವುದಿಲ್ಲ. ಉಲ್ಲಾಸದಿಂದಿರುವ ಮೂಲಕ, ಅನಂತಸಾಗರದಲ್ಲಿ ಒಂದಾಗುವ ಮೂಲಕ, ಅಗೋಚರ ದೈವದೊಂದಿಗೆ ಗುರುತಿಸಿಕೊಳ್ಳುವ ಮೂಲಕ ಮಾತ್ರವೇ, ನಿರಂತರ ಬೇಡಿಕೆಗಳು ಹಾಗು ಅಹಂಕಾರದ ಭಾರದಿಂದ ನಮ್ಮನ್ನು ನಾವು ಬಿಡಿಸಿಕೊಳ್ಳಬಹುದು. ಬಾಹ್ಯಜಗತ್ತಿನೊಂದಿಗೆ ನಾವು ಗುರುತಿಸಿಕೊಂಡಾಗ, ನಾವು ಅದರಲ್ಲಿಯೇ ಮಗ್ನರಾಗಿ ಉಳಿದುಬಿಡುತ್ತೇವೆ, ಮತ್ತು ಅದಕ್ಕೆ ಮಿತಿಯೇ ಇರದು. ಇದು, ನಾವು ಹೆಣೆದ ಜಾಲದಲ್ಲಿ ನಾವೇ ಸಿಲುಕಿಕೊಂಡಂತೆ.

ಬಾಹ್ಯ ಜೀವನವು, ನಮ್ಮ ಪ್ರಾಕೃತಿಕ ಅಥವಾ ವಿಷಯಾಸಕ್ತಿಗಳ ಪೂರೈಕೆಯನ್ನು ಬಯಸುತ್ತದೆ; ಇಲ್ಲಿ ಅವಲಂಬನೆ ಬಾಹ್ಯಾಂಶದ ಮೇಲಿದೆ. ಅಂತಹ ಅವಲಂಬನೆ ನಮ್ಮನ್ನು ಇಚ್ಛೆಗಳ ದಾಸರನ್ನಾಗಿಸುತ್ತದೆ. ಹುಲಿ ತನ್ನ ಉಳಿವಿಗಾಗಿ ಎಮ್ಮೆಯನ್ನೊ, ಜಿಂಕೆಯನ್ನೊ ಕೊಲ್ಲುತ್ತದೆ. ಗಂಡು ಸಿಂಹವೊಂದಕ್ಕೆ ಸಂತಾನೋತ್ಪತ್ತಿಗಾಗಿ ಆರು ಹೆಣ್ಣು ಸಿಂಹಗಳಿವೆಯೆಂದು ಹೆಮ್ಮೆ. ಅದು ಪ್ರಕೃತಿ. ನಿಖರವಾಗಿ ಹೇಳುವುದಾದರೆ, ಬಾಹ್ಯ ಪ್ರಕೃತಿ. ನಾವು ರಸಗುಲ್ಲ, ಬಿರಿಯಾನಿ ಅಥವಾ ಪಿಟ್ಜಾಗಳಿಂದ ಮುಕ್ತರಾಗಿರಬಹುದು, ಆದರೆ ಆಹಾರದ ಅಗತ್ಯದಿಂದ ಯಾವತ್ತೂ ಮುಕ್ತರಾಗುವುದಿಲ್ಲ. ವ್ಯಕ್ತಿಯ ಅಹಂ ಅನ್ನು ತಣಿಸುವ ಬಗೆ ಹೇಗೆ? ಅಹಂಕಾರ ದೈವದತ್ತವಾದುದೆ? ಅದು ಸ್ವಯಂಸೃಷ್ಟಿ. ಅದು ಅಂತರಾಳದಲ್ಲಿರುವ, ಅಗೋಚರ ಜಗತ್ತಿನಲ್ಲಿ ಹುಟ್ಟುತ್ತದೆ.

ಹಸಿವು, ನೀರಡಿಕೆ, ಕಾಮಾಸಕ್ತಿಗಳನ್ನು ತಣಿಸುವುದರ ಅಗತ್ಯವನ್ನು ನಾವು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು; ಅವು ಅತ್ಯಾವಶ್ಯಕ ಹಾಗು ಪ್ರಕೃತಿ ಯೋಜನೆಗೆ ಅನುಗುಣವಾದುವು. ಅಹಂಕಾರವೂ ಪ್ರಕೃತಿಯ ಕೊಡುಗೆಯೆ? ಹೊಟ್ಟೆ ಭಾರವಾದಾಗ ಅಥವಾ ನೋವಾದಾಗ, ಅದು ಮತ್ತಷ್ಟು ಆಹಾರ ತೊಂದರೆಯನ್ನುಂಟು ಮಾಡುತ್ತದೆಯೆಂಬ ಸೂಚನೆಯಾಗಿರುತ್ತದೆ. ಅವಶ್ಯಕವಲ್ಲದುದರ ಬಗ್ಗೆ ಎಚ್ಚರಿಕೆ ನೀಡಲಾಗುತ್ತದೆ. ಅಹಂಕಾರವೂ ಅನಗತ್ಯವಾದುದು, ಮತ್ತು ಅನಗತ್ಯವಾದುದರ ಪೂರೈಕೆಯು ವೈಯಕ್ತಿಕ ಆರೋಗ್ಯದ, ಅಂದರೆ ದೈಹಿಕ, ಮಾನಸಿಕ, ಭಾವನಾತ್ಮಕ ಅಥವಾ ಆಧ್ಯಾತ್ಮಿಕ ಆರೋಗ್ಯಕ್ಕೆ ವಿರುದ್ಧವಾದುದು.

ಪ್ರತಿ ಬಾರಿಯೂ ಅಗತ್ಯವಾದ ಈ-ಮೇಲ್ ಬಂದಾಗ ನಾನು ಅದಕ್ಕೆ ಉತ್ತರಿಸುತ್ತೇನೆ ಅಥವಾ ಕಡತಸಂಗ್ರಹಕ್ಕೆ ಸೇರಿಸುತ್ತೇನೆ. ನಾನು ಸ್ಪಂದಿಸದಿದ್ದಾಗ ಸಾಮಾನ್ಯವಾಗಿ ಪತ್ರ ಕಳುಹಿಸಿದವರು ಪುನಃ ಬರೆಯುತ್ತಾರೆ, "ದಾಜಿ, ನೀವು ನನ್ನ ಮೇಲೆ ಅಸಮಾಧಾನಗೊಂಡಿರುವಿರಾ?" ಅವರು ಹೇಗಾದರೂ ನಾನು ಸ್ಪಂದಿಸುವಂತೆ ಒತ್ತಾಯಿಸುತ್ತ, "ಇಲ್ಲ, ಇಲ್ಲ, ನನಗೇನೂ ಅಸಮಾಧಾನವಿಲ್ಲ," ಎಂದು ಹೇಳಲೆಂದು ನಿರೀಕ್ಷಿಸುತ್ತಾರೆ. ಕೆಲವು ಸಂವಾದಗಳು ಅರ್ಥಹೀನವಾಗಿರುತ್ತವೆ ಹಾಗು ಎಲ್ಲರ ಸಮಯವನ್ನೂ ವ್ಯರ್ಥಗೊಳಿಸುತ್ತವೆ. ಈ ತರಹದ ಅಹಂ ಬಯಸುವ ಅತ್ಯುಪಚಾರ ಮತ್ತು ಅತಿ ಲಾಲನೆಯನ್ನು ಅವಲಂಬಿಸಿರುವವರು, ಆಳಕ್ಕಿಳಿಯುವುದು ಅಪರೂಪ. ಅಹಂಕಾರವು, ವಿಶೇಷವಾಗಿ ತನ್ನ ಸಮಾನರ, ತನ್ನದೇ ಬಗೆಯ ಅಥವಾ ತಾನು ಗೌರವಿಸುವವರಿಂದ ಸದಾ ಬಾಹ್ಯರೂಪದ ಗಮನ ಮತ್ತು ಲಾಲನೆಯನ್ನು ಬೇಡುತ್ತಿರುತ್ತದೆ.

ಸಮಾನ ಬಗೆಯವರಿಂದೇಕೆ? ಭಾರತೀಯ ಸಂಸತ್ತಿನಲ್ಲಿ ಸೂಟ್ ಮತ್ತು ಟೈ ಅನ್ನು ಧರಿಸುವ ಅಗತ್ಯವೇನಿದೆ? ನಿಮ್ಮಿಂದ ಯಾರಿಗೆ ಅಸೂಯೆಯಾಗುತ್ತದೆ? ಸ್ವಾಮಿ ವಿವೇಕಾನಂದ ಅಥವಾ ರಾಮಕೃಷ್ಣ ಪರಮಹಂಸರ ಎದುರಿಗೆ ವಜ್ರದ ಹಾರ ಮತ್ತು ಚಿನ್ನದ ಎಳೆಗಳ ಕುಪ್ಪಸ ತೊಡುವುದರಿಂದ ಉಪಯೋಗವೇನು? ಅವರು ಅಸೂಯೆ ಪಡುವರೇನು? ಬದಲಾಗಿ, ಅವರ ಪ್ರಶಂಸೆ ದೊರೆಯದ ಕಾರಣ ನಿಮ್ಮ ಅಹಂಕಾರ ನೆಲಕಚ್ಚುತ್ತದೆ. ಅಹಂಕಾರವು ನಿಮ್ಮ ಕೇಂದ್ರದಿಂದ ನಿಮ್ಮನ್ನು ದೂರವಾಗಿಸುವ ಪರಿಧಿಯ ಅತಿ ಹೊರಗಿನ ಭಾಗವಾಗಿದೆ. ಆ ಬಾಹ್ಯತಮ ಸರಹದ್ದಿನಿಂದ ನಿಮ್ಮ ಹೃದಯವನ್ನು ಆಲಿಸುವುದು ಕಠಿಣ. ಅದರ ಬದಲು ನೀವು ಅನ್ಯರಿಗೆ, ಅವರ ಅಭಿಪ್ರಾಯಗಳಿಗೆ ಸನಿಹವಾಗಿರುತ್ತೀರಿ. ಒಬ್ಬ ಆಧ್ಯಾತ್ಮಿಕ ವ್ಯಕ್ತಿಗೆ ಇಂತಹ ಪ್ರವೃತ್ತಿ ವಿಷಪ್ರಾಯವಾದುದು.

ಅಹಂಕಾರವು ಸಾಮಾನ್ಯವಾಗಿ ಸಮಷ್ಟಿಯೊಂದಿಗೆ ಗುರುತಿಸಿಕೊಳ್ಳುತ್ತದೆ: ಉದಾಹರಣೆಗೆ, ಇತರರಿಗಾಗುವ ಘಾಸಿಯನ್ನು ಲೆಕ್ಕಿಸದೆ, ನಿಮ್ಮ ದೇಶವೇ ಅತ್ಯುತ್ತಮವೆಂಬ ರಾಷ್ಟ್ರಾಭಿಮಾನ ನಿಮ್ಮಲ್ಲಿ ಬೆಳೆಯಬಹುದು. ವಿಜ್ಞಾನಿಗಳು ಹಾಗು ಆಧ್ಯಾತ್ಮಿಕ ಜನರು ತಮ್ಮ ದೃಷ್ಟಿಕೋನವೇ ಸರಿ ಎಂದು ನಂಬಿಕೊಂಡು, ಸಂಕುಚಿತ ಮನೋಭಾವ ಬೆಳೆಸಿಕೊಳ್ಳಬಹುದು. "ನನಗೆ ಗೊತ್ತು. ನಾನು ಸರಿ," ಎಂಬ ರೋಗವೇ ಪ್ರಾಯಶಃ ನಾವೆಲ್ಲ ಎದುರಿಸುವ ಅತಿ ದೊಡ್ಡ ಮಹಾಮಾರಿ. ಪ್ರೇಮಕಿರಣವನ್ನು ವಿಪಥಗೊಳಿಸುವ ಶೋಧಕಗಳಲ್ಲಿ ಇದು ಅತಿಮುಖ್ಯವಾದುದು.

ನಮ್ಮ ನಂಬಿಕೆಗಳು, ನಮ್ಮ ತತ್ತ್ವಗಳು, ನಮ್ಮ ಪೂರ್ವಗ್ರಹಗಳಿಗೆ ನಾವು ಹೆಚ್ಚು ಕಟ್ಟುಬಿದ್ದಂತೆಲ್ಲ, ದೊಡ್ಡ ಅಡಚಣೆಗಳು ಪ್ರೇಮಕಿರಣಕ್ಕೆ ಪ್ರತಿಬಂಧವಾಗಿ, ಅದು ನಮ್ಮನ್ನು ಗುರಿ ತಲುಪಿಸದಂತೆ ತಡೆಯನ್ನುಂಟುಮಾಡುತ್ತವೆ. ವಿಶೇಷವಾಗಿ ನಮ್ಮ ಸಮಷ್ಟಿ-ಅಹಂ ಮತ್ತಷ್ಟು ಅಪಾಯಕಾರಿ; ಏಕೆಂದರೆ ಅದು ಗಲಭೆಕಾರೀ ಗುಂಪು-ಮನೋಭಾವವನ್ನು ತರುತ್ತದೆ. ನಾವಿದನ್ನು ಧಾರ್ಮಿಕ ಮತಾಂಧತೆಯಲ್ಲಿ ಹಾಗು ಸಮಾಜದಲ್ಲಿ ರಾಜಕೀಯ ಧ್ರುವೀಯತೆಯಿದ್ದಾಗ ಕಾಣಬಹುದು. ಈ ಪೂರ್ವಗ್ರಹಗಳು ದ್ವೇಷ, ಹಿಂಸೆ ಮತ್ತು ಕೆಲವೊಮ್ಮೆ ಸಮರಕ್ಕೂ ಕಾರಣವಾಗಬಹುದು. ಅಂತಹ ಪರಿಸರದಲ್ಲಿ, ನಮ್ಮ ಸುತ್ತಲಿನ ಜನರು ಸಾಮಾನ್ಯವಾಗಿ ಇತರ ದೃಷ್ಟಿಕೋನಗಳನ್ನು ಕಾಣಲು ನಮಗೆ ನೆರವಾಗದೆ, ನಮ್ಮದೇ ನಂಬಿಕೆಗಳನ್ನು ಗಟ್ಟಿಗೊಳಿಸುತ್ತಾರೆ. ನಾವು ಮತ್ತಷ್ಟು ಸಂಕುಚಿತ ಮನೋಭಾವದವರಾಗುತ್ತೇವೆ.

ಆದರೆ ಒಲವು ನಮ್ಮನ್ನು ವಿರುದ್ಧ ದಿಕ್ಕಿನಲ್ಲಿ, ಏಕತಾಭಾವದೆಡೆಗೆ ಒಯ್ಯುವ ಸ್ನೇಹಿತನಾಗಲೂ ಸಾಧ್ಯ. ಒಲವು ನಿಜವಾಗಲೂ ಪ್ರೇಮದಿಂದೊಡಗೂಡಿದರೆ ಹಾಗಾಗುತ್ತದೆ. ಆಗ ನಮ್ಮ ಅರಿವು ವಿಸ್ತಾರವಾಗುತ್ತದೆ; ಅದೇ ಆಧ್ಯಾತ್ಮಿಕ ಯಾತ್ರೆ. ಒಲವಿನ ಬಗ್ಗೆ ನಾವು ಕಲಿಯುವುದು ಹೇಗೆ? ಆರಂಭದಿಂದಲೇ, ತಾಯಿಯ ಗರ್ಭದಲ್ಲಿದ್ದಾಗ ಆಕೆಯೊಂದಿಗೆ ನಾವದನ್ನು ಅನುಭವಿಸಲಾರಂಭಿಸುತ್ತೇವೆ. ನಾವು ಬೆಳೆದಂತೆಲ್ಲ, ಹೆಚ್ಚು ಜನರನ್ನು ಭೇಟಿಯಾಗುತ್ತ, ಅವರೊಂದಿಗೆ ಒಲವಿನ ಭಾವ ಬೆಳೆಯುತ್ತದೆ. ಮಕ್ಕಳ ಮೇಲೆ ವಾತ್ಸಲ್ಯ ಹಾಗು ಸಮಾನವಯಸ್ಕರೊಂದಿಗೆ ಪ್ರೇಮ ಬೆಳೆಯುತ್ತದೆ. ನಮಗೆ ಮಾರ್ಗದರ್ಶನ ಮಾಡುವ ಗುರುಗಳೂ ಸೇರಿದಂತೆ, ಹಿರಿಯರಲ್ಲಿ ವಿಶ್ವಾಸ, ಶ್ರದ್ಧೆ ಮತ್ತು ಪ್ರೇಮಭಾವ ಉತ್ಪನ್ನವಾಗುತ್ತವೆ. ಇವೆಲ್ಲವೂ ಒಲವಿನ ಉಪ-ಉತ್ಪನ್ನವಾಗಿದ್ದು, ನಾವು ನಮ್ಮ ಆಂತರಿಕ ಯಾತ್ರೆಯನ್ನು ಮುಂದುವರಿಸಿದಂತೆ ಅದರಲ್ಲಿ ಏರಿಳಿತಗಳಾಗುತ್ತಿರುತ್ತವೆ. "ಯಾರನ್ನು ಪ್ರೇಮಿಸುವುದು?" "ಯಾರೊಂದಿಗೆ ಸಹಭಾಗಿಯಾಗುವುದು?" "ಯಾರನ್ನು ನಂಬುವುದು?" ಮುಂತಾದಾಗಿ ಕೇಳುತ್ತಲೇ, ನಾವು ಇವೆಲ್ಲವನ್ನೂ ಅನುಭವಿಸುತ್ತೇವೆ. ಒಲವು ಗಾಢವಾಗಿ ಪ್ರೇಮಕ್ಕೆ ತಿರುಗುತ್ತದೆ ಹಾಗು ಅಂತಿಮವಾಗಿ ಶರಣಾಗತ ಸ್ಥಿತಿಯಲ್ಲಿ ವಿಲೀನಗೊಳ್ಳುತ್ತದೆ. ಹಾಗಾದಾಗಲೇ ಒಲವು ಪಕ್ವಗೊಂಡು ಭಕ್ತಿಯಾಗುವುದು.

ಒಲವು ಗಾಢವಾಗಿ ಪ್ರೇಮಕ್ಕೆ ತಿರುಗುತ್ತದೆ
ಹಾಗು ಅಂತಿಮವಾಗಿ ಶರಣಾಗತ ಸ್ಥಿತಿಯಲ್ಲಿ
ವಿಲೀನಗೊಳ್ಳುತ್ತದೆ. ಹಾಗಾದಾಗಲೇ ಒಲವು
ಪಕ್ವಗೊಂಡು ಭಕ್ತಿಯಾಗುವುದು.



ಪ್ರೇಮಕಿರಣ ಚಲಿಸುವ ವೇಗ, ಬೆಳಕಿನ ವೇಗಕ್ಕಿಂತ ಅಧಿಕವಾಗಿದ್ದು, ನಾವು ಎಲ್ಲ ಶೋಧಕಗಳನ್ನೂ ನಿವಾರಿಸಬಲ್ಲೆವಾದರೆ, ಕೇಂದ್ರವನ್ನು ತಲುಪಲು ಕ್ಷಣಕಾಲವೂ ಬೇಕಿಲ್ಲ. ಈ ಶೋಧಕಗಳು ಸೃಷ್ಟಿಸಿದ ಅಡಚಣೆಗಳು, ಪ್ರೇಮಕಿರಣವನ್ನು ಕೇಂದ್ರದಿಂದ ದಿಕ್ಚ್ಯುತಿಗೊಳಿಸಿದಾಗ, ನಾವು ಸಂಕಷ್ಟಕ್ಕೀಡಾಗುತ್ತೇವೆ. ಪೂರ್ವಗ್ರಹ, ಅಸೂಯೆ, ಮಾತ್ಸರ್ಯ, ಲೋಭ ಮತ್ತು ಕೋಪದಂತಹ ಶೋಧಕಗಳು ಎಷ್ಟು ಪ್ರಭಾವಶಾಲಿಗಳೆಂದರೆ, ಭೂಗತ ನ್ಯೂಕ್ಲಿಯರ್ ಬಂಕರುಗಳಂತೆ ಯಾವುದೂ ತಮ್ಮನ್ನು ಭೇದಿಸಗೊಡುವುದಿಲ್ಲ. ಪ್ರೇಮಕಿರಣದ ಚಮತ್ಕಾರ ಕಾರ್ಯವೆಸಗದಂತೆ ಅವು ತಡೆಯನ್ನೊಡ್ಡುತ್ತವೆ.

ಇತ್ತೀಚೆಗೆ, ಪುರಾತನ ಭಾರತೀಯ ಸಂಪ್ರದಾಯಗಳು ಈ ವಿಷಯವಾಗಿ ನಮ್ಮ ಜ್ಞಾನಾಭಿವೃದ್ಧಿ ಮಾಡುತ್ತವೆಂಬುದನ್ನು ನಾನು ಅರಿತುಕೊಂಡಿದ್ದೇನೆ ಅದರಲ್ಲೂ ವಿಶೇಷವಾಗಿ ಭಕ್ತಿಸೂತ್ರಗಳು. ನಾವು ಸಾಮಾನ್ಯವಾಗಿ ಭಕ್ತಿಯನ್ನು "ಪ್ರೇಮ ಮತ್ತು ಉಪಾಸನೆ"ಯೆಂದು ಅರ್ಥೈಸುತ್ತೇವೆ; ಆದರೆ ಭಕ್ತಿ ಅದಕ್ಕಿಂತಲೂ ಮೂಲಭೂತವಾದುದು. ಅದು, ಹೃದಯದ ಮೂಲಕ ಸಮಸ್ತ ಚರಾಚರಗಳೊಂದಿಗಿನ ಸಂಪರ್ಕಭಾವ ವೈಶ್ವಿಕ ದಿವ್ಯಪ್ರಜ್ಞೆಯೊಂದಿಗೆ ನಮ್ಮ ಜೀವಪ್ರಜ್ಞೆಯ ಸಂಪರ್ಕಕೊಂಡಿ. ಭಕ್ತಿಯ ವಿನಾ, ನಮ್ಮೆಲ್ಲ ವಿಚಾರ ಮತ್ತು ಕಾರ್ಯಗಳಲ್ಲಿ ಉತ್ಸಾಹ ಮತ್ತು ಸಂತೋಷವೆಂಬ ಮುಖ್ಯ ಅಂಶಗಳೇ

ಇಲ್ಲವಾಗುವ ಕಾರಣದಿಂದ, ಅಲ್ಲಿ ಉದ್ದೇಶದ ಕೊರತೆಯಿರುತ್ತದೆ. ಆಂತರಿಕ ಯಾತ್ರೆಯಲ್ಲಿ ಭಕ್ತಿ ನಮ್ಮ ಜೀವನದಿ; ಅದು ನಮ್ಮನ್ನು ಪ್ರೇಮಕಿರಣದೊಂದಿಗೆ ಒಗ್ಗೂಡಿಸುತ್ತದೆ. ನಿಖರವಾಗಿ ಹೇಳಬೇಕೆಂದರೆ, ಭಕ್ತಿ ಪ್ರೇಮಕಿರಣವನ್ನು ವರ್ಧಿಸುತ್ತದೆ.

> ಭಕ್ತಿಯ ವಿನಾ, ನಮ್ಮೆಲ್ಲ ವಿಚಾರ ಮತ್ತು ಕಾರ್ಯಗಳಲ್ಲಿ ಉತ್ಸಾಹ ಮತ್ತು ಸಂತೋಷವೆಂಬ ಮುಖ್ಯ ಅಂಶಗಳೇ ಇಲ್ಲವಾಗುವ ಕಾರಣದಿಂದ, ಅಲ್ಲಿ ಉದ್ದೇಶದ ಕೊರತೆಯಿರುತ್ತದೆ. ಆಂತರಿಕ ಯಾತ್ರೆಯಲ್ಲಿ ಭಕ್ತಿ ನಮ್ಮ ಜೀವನದಿ; ಅದು ನಮ್ಮನ್ನು ಪ್ರೇಮಕಿರಣದೊಂದಿಗೆ ಒಗ್ಗೂಡಿಸುತ್ತದೆ.

ಅಹಂಕಾರವು, ಪ್ರಾಬಲ್ಯ ಮತ್ತು ವ್ಯಕ್ತಿಗತ ಯಶಸ್ಸಿನ ಭಾಷೆಯನ್ನಷ್ಟೇ ಬಲ್ಲುದು, ಪ್ರೇಮದ ಭಾಷೆಯನ್ನಲ್ಲ. ವಿನಮ್ರತೆ, ಅನಾಮಿಕತೆ ಮತ್ತು ಮುಕ್ತ ಹೃದಯದ ನಮ್ಯತೆಯಂತಹ ಭಾಷೆಗಳು ಅಹಂಕಾರಿಗೆ ಅನ್ಯವೆನಿಸುತ್ತವೆ; ಅವರಿಗದು ಅರ್ಥವೇ ಆಗದು. ಕೇಂದ್ರದೆಡೆಗಿನ ಪಯಣ ನಮ್ಮನ್ನು ಹಂತಹಂತವಾಗಿ ಒಂದು ವೃತ್ತದಿಂದ ಮತ್ತೊಂದಕ್ಕೆ, ಒಂದು ಆಯಾಮದಿಂದ ಮತ್ತೊಂದಕ್ಕೆ ಒಯ್ಯುತ್ತದೆ. ಆಗ ನಾವು ಹೊಂದಿಕೊಳ್ಳದಿದ್ದರೆ ಪ್ರತಿಯೊಂದು ಹೊಸ ಪರಿಸರವನ್ನು ಸ್ವೀಕರಿಸಲು ಪ್ರಯಾಸಪಡುತ್ತೇವೆ. ಆದ್ದರಿಂದಲೇ ಚಾರಿತ್ರ್ಯ ಪರಿಷ್ಕರಣ (ಅಖಲಾಖ್) ಅಗತ್ಯವೆಂದು ಸಂತರು ಹೇಳುತ್ತಾರೆ. ಅಂತರಂಗದಲ್ಲಿ ಬದಲಾಗುತ್ತಿರುವ ಆಧ್ಯಾತ್ಮಿಕ ಗುಣಲಕ್ಷಣಗಳ ಪರಿಸರಕ್ಕೆ ತಕ್ಕಂತೆ ನಮ್ಮ ನಡತೆಯನ್ನು ಸರಿಹೊಂದಿಸಿಕೊಳ್ಳುವ ಅಗತ್ಯವನ್ನು ಅವರು ಸ್ವಂತ ಅನುಭವದಿಂದ ತಿಳಿದುಕೊಂಡಿದ್ದಾರೆ. ಆ ಹೊಂದಾಣಿಕೆಯನ್ನು ಪ್ರೇಮ ಸರಿದೂಗಿಸುತ್ತದೆ. ಉದಾಹರಣೆಗೆ, ನಾವು ಹೃದಯಮಂಡಲದಲ್ಲಿ ಶಾಂತಿ, ಸಮಾಧಾನದ ದೈವೀಕ್ಷೇತ್ರ ಹಾಗು ಭೌತಿಕತೆಯಿಂದ ಮುಕ್ತವಾದ ಎರಡನೇ ಚಕ್ರವನ್ನು ತಲುಪಿದಾಗ, ಪ್ರೀತಿಪಾತ್ರರ ಮೇಲೆ ಕೂಗಾಡುವುದು ಸರಿಯೆ? ಅಂತಹ ರೋಷಾವೇಶದ ನಡವಳಿಕೆ ಎರಡನೇ ಚಕ್ರದ ಆಂತರಿಕ ಆಯಾಮಕ್ಕೆ ಸರಿಹೊಂದುವುದಿಲ್ಲ.

'ಅನಂತದೆಡೆಗೆ' ಪುಸ್ತಕದಲ್ಲಿ ಬಾಬೂಜಿಯವರು, ಚಕ್ರದಿಂದ ಚಕ್ರಕ್ಕೆ ಚಲಿಸುವಾಗ ಉಂಟಾಗುವ ಪ್ರಗತಿಯ ವಿವರಣೆ ನೀಡುತ್ತಾರೆ. ಹೃದಯದ ಮೊದಲನೆಯ ಚಕ್ರದಲ್ಲಿ, ಧ್ಯಾನಸಮಯದಲ್ಲಿ ಗುರುಗಳು ನಮ್ಮಲ್ಲಿ ಜೀವಂತಗೊಳಿಸಿದ ಅವಸ್ಥೆಯ ಸಂಪೂರ್ಣ ಪ್ರಜ್ಞೆಯನ್ನು ಗಳಿಸಲು, ನಂತರ ಅದರೊಂದಿಗೆ ಒಂದಾಗುವಂತೆ ಅದನ್ನು ಅಂತರ್ಗತಗೊಳಿಸಿಕೊಳ್ಳುವಂತೆ ಹೇಳುತ್ತಾರೆ. ಈ ಪ್ರಕ್ರಿಯೆಯ ಮೂಲಕ ನಾವು ಸಹಜವಾಗಿಯೆ ಹೆಚ್ಚಿನ ಒಲವನ್ನು ಬೆಳೆಸಿಕೊಳ್ಳುತ್ತೇವೆ. ಎರಡನೆಯ ಚಕ್ರದಲ್ಲಿ, ನಮ್ಮ ತೀವ್ರ ಭಕ್ತಿಯೇ ನಮ್ಮನ್ನು ಈ ಮುಂದಿನ ಆಯಾಮದವರೆಗೆ ಎಳೆದುತಂದಿದೆ ಎಂಬುದನ್ನು ಅವರು ನೆನಪಿಸುತ್ತಾರೆ. ಭಕ್ತಿಯ

ತೀವ್ರತೆಯು ಎರಡನೆಯ ಚಕ್ರದೊಳಗಿನ ಪ್ರವೇಶಕ್ಕೆ ನೇರ ಅನುಪಾತದಲ್ಲಿದೆಯೆಂದು ಹೇಳಬಹುದು. ಇದು ಒಲವಿನ ಗಾಢಸ್ತರವಾದ ಭಕ್ತಿಯೆನಿಸಿದೆ. ಮೂರನೆಯ ಚಕ್ರದಲ್ಲಿ ನಾವು ನಿಜವಾದ ಪ್ರೇಮಾಗ್ನಿಯನ್ನು ಅನುಭವಿಸುತ್ತೇವೆ; ಅದು ತನ್ಮೂಲಕ ದೈವೀಕೃಪೆಯನ್ನು ಆಕರ್ಷಿಸಿ, ಯಾತ್ರೆಯಲ್ಲಿ ನಮ್ಮನ್ನು ಮತ್ತಷ್ಟು ಮುಂದಕ್ಕೊಯ್ಯುತ್ತದೆ. ಒಲವಿನ ಈ ಗಾಢಾನುಭವ ಅದೆಷ್ಟು ಶಕ್ತಿಶಾಲಿಯೆಂದರೆ, ಅದು ಕೇಂದ್ರದಿಂದಲೇ ಸ್ಪಂದನವನ್ನು ಆಕರ್ಷಿಸುತ್ತದೆ. ಈ ರೀತಿಯಾಗಿ, ನಾವು ಪ್ರೇಮಕಿರಣದ ಮೇಲೆ ಸಾಗುತ್ತಿದ್ದಂತೆಯೆ, ಪ್ರತಿಯೊಂದು ಆಯಾಮವೂ ಹಿಂದಿನ ಆಯಾಮದ ಮೇಲೆ ನಿರ್ಮಿತವಾಗುತ್ತದೆ.

ನಾವು ಸಂಬಂಧಗಳ ಮೂಲಕ ಪ್ರೇಮವನ್ನು ಕಲಿಯುತ್ತೇವೆ. ಅವು ನಮಗೆ ಪ್ರೇಮದ ತರಬೇತಿ ನೀಡುವ ಕ್ಷೇತ್ರಗಳು. ಕಿರಿಯರು ಹಾಗು ಕುಟುಂಬದ ಸದಸ್ಯರೊಂದಿಗೆ ವಾತ್ಸಲ್ಯವಾಗಿ ವ್ಯಕ್ತವಾಗುವ ಒಲವು, ಸಮಾನವಯಸ್ಕರೊಂದಿಗೆ ಪ್ರೇಮರೂಪದಲ್ಲಿ ಗಾಢವಾಗುತ್ತದೆ. ಆದರೆ ಅಹಂಕಾರ ಅಡ್ಡಬರುವುದೂ ಇಲ್ಲಿಯೇ. ಈಗ ಸಂಭವಿಸಬಹುದಾದ ವಿಘಟನೆಯನ್ನು ತಡೆಯಲು ಸ್ವಾಧ್ಯಾಯವೆಂಬ ಶಿಸ್ತು ಬಹುಮುಖ್ಯ. ಪ್ರೇಮಪಥದಲ್ಲಿ ನಾವು ದಾರಿತಪ್ಪಿದಾಗ  ಹೀಗಾಗಿಬಿಡುವುದು.

ಪ್ರೇಮವನ್ನು ಬೆಳೆಸಿಕೊಳ್ಳಲು ಒಲವು ಪ್ರಮುಖ ಹಂತವಾದರೂ, ಅದು ಪಾಶವೂ ಆಗಬಹುದು. ಯಾವುದೇ ನಿರ್ದಿಷ್ಟ ಸ್ತರದಲ್ಲಿ ನಾವು ಅನುರಕ್ತಿ ಬೆಳೆಸಿಕೊಂಡರೆ, ಸಿಲುಕಿಕೊಳ್ಳುತ್ತೇವೆ. ಉದಾಹರಣೆಗೆ, ನಾವು ಕೇವಲ ಕುಟುಂಬದೆಡೆಗೆ ಮಾತ್ರ ಗಮನ ನೀಡಿದರೆ, ನಮ್ಮ ಪ್ರೇಮವನ್ನು ಸಮುದಾಯಕ್ಕೆ ಅಥವಾ ಸಮಸ್ತ ಮನುಕುಲಕ್ಕೆ ಅಥವಾ ಸಕಲ ಸೃಷ್ಟಿಗೆ ವಿಸ್ತರಿಸಲು ಸಾಧ್ಯವಾಗುವುದಿಲ್ಲ. ಪ್ರೇಮವಾಹಿನಿ ಕಿರಿದಾಗಿದ್ದರೆ, ನಾವು ಎಲ್ಲರನ್ನೂ ಪ್ರೇಮಿಸಲು ಅಸಮರ್ಥರಾಗುತ್ತೇವೆ. ನಿಜವಾದ ಭಕ್ತಿಯುಂಟಾಗಲು ನಾವು ನಮ್ಮ ಪ್ರೇಮದ ಸಾಮರ್ಥ್ಯವನ್ನು ವಿಸ್ತರಿಸುತ್ತಲೇ ಇರಬೇಕು ಹಾಗು ಅದು ಜಗತ್ತನ್ನೇ ಕಬಳಿಸುವಂತಾಗಬೇಕು. ಹೃದಯದ ಈ ನಿಜವಾದ ಔದಾರ್ಯ ಆಧ್ಯಾತ್ಮಿಕ ಸಾಧನೆಯ ಪರಿಣಾಮವಾಗಿದೆ.

ಸಾಮಾನ್ಯವಾಗಿ, ಪ್ರಗತಿಯ ಸೋಪಾನ ಹೀಗಿರುತ್ತದೆ: ಒಲವಿನಿಂದ ವಾತ್ಸಲ್ಯ, ಅಲ್ಲಿಂದ ಪ್ರೇಮ, ನಂತರ

ಪ್ರೇಮವಾಹಿನಿ ಕಿರಿದಾಗಿದ್ದರೆ, ನಾವು ಎಲ್ಲರನ್ನೂ ಪ್ರೇಮಿಸಲು ಅಸಮರ್ಥರಾಗುತ್ತೇವೆ. ನಿಜವಾದ ಭಕ್ತಿಯುಂಟಾಗಲು ನಾವು ನಮ್ಮ ಪ್ರೇಮದ ಸಾಮರ್ಥ್ಯವನ್ನು ವಿಸ್ತರಿಸುತ್ತಲೇ ಇರಬೇಕು ಹಾಗು ಅದು ಜಗತ್ತನ್ನೇ ಕಬಳಿಸುವಂತಾಗಬೇಕು. ಹೃದಯದ ಈ ನಿಜವಾದ ಔದಾರ್ಯ ಆಧ್ಯಾತ್ಮಿಕ ಸಾಧನೆಯ ಪರಿಣಾಮವಾಗಿದೆ.



ಶ್ರದ್ಧೆ. ಶ್ರದ್ಧೆ ಅತಿ ದೊಡ್ಡ ಸಾಧನೆಯಾಗಿದ್ದು, ನಿಜವಾದ ಶ್ರದ್ಧೆಯು ಶರಣಾಗತಿಯಾಗಿ ಬೆಳೆಯುತ್ತದೆ. ನಾವು ಇವೆಲ್ಲ ಪ್ರಗತಿಯ ಹಂತಗಳಲ್ಲಿ ಹಾದುಹೋಗುತ್ತೇವೆ. ಆದರೆ ಮುಂದೇನಾಗುತ್ತದೆ? ನಾವು ಎಲ್ಲಿ

ತಲುಪುತ್ತೇವೆ? ನಾವು ಪ್ರೇಮಕಿರಣದೊಂದಿಗೆ ಸರಾಗವಾಗಿ, ಶ್ರಮವಿಲ್ಲದೆ ಪಯಣಿಸಿ, ಪರತತ್ತ್ವದೊಂದಿಗೆ ಲಯವಾಗಲು ನೆರವಾಗುವುದೇ ಭಕ್ತಿಯ ಉದ್ದೇಶ. ಲಯಾವಸ್ಥೆಯಲ್ಲಿ ನಮ್ಮ ಇಚ್ಛೆ, ಭಾವುಕತೆ ಹಾಗು ಅಹಂಕಾರದ ಶೋಧಕಗಳನ್ನು ಶುದ್ಧೀಕರಿಸಲಾಗುವುದರಿಂದ, ಪಯಣಪಥ ನಿರ್ವಿಘ್ನವಾಗಿರುತ್ತದೆ. ನಾವು ಕೇಂದ್ರವನ್ನು ಈಗಾಗಲೇ ತಲುಪಿದೆವೆಂದು ನೀವಂದುಕೊಳ್ಳಬಹುದು, ಆದರೆ ಅದಿನ್ನೂ ಮುಂದಿದೆ. ಈಗ, ಲಯಾವಸ್ಥೆಯನ್ನು ತಲುಪಿದ ನಂತರವೇ ನಿಜವಾದ ಯಾತ್ರೆಯ ಆರಂಭವಾಗುತ್ತದೆ! ಸರಳವಾಗಿ ಹೇಳುವುದಾದರೆ, ನೀವು ಇಚ್ಛೆಗಳನ್ನು ತೊರೆದೊಡನೆಯೆ, ಮೋಕ್ಷ ಖಂಡಿತ; ಅಹಂಕಾರವನ್ನು ತೊರೆದಾಕ್ಷಣವೇ ವಿಲೀನತೆ ಸಂಭವಿಸುತ್ತದೆ.

ನಾವೀಗ ಕೇಂದ್ರ ಮಂಡಲವನ್ನು ಪ್ರವೇಶಿಸುವೆವು; ಅದರೊಳಗೆ ಜ್ಯೋತಿರ್ಮಯ ವೃತ್ತಗಳೆಂಬ ಏಳು ವೃತ್ತಗಳಿವೆ. ನಾವು ಮುನ್ನಡೆಯುತ್ತ, ಅತಿ ಸೂಕ್ಷ್ಮವಾದ ಪ್ರಜ್ಞಾನದ ಅನುಭವ ಪಡೆಯುತ್ತೇವೆ. ಈ ಮಂಡಲದಲ್ಲಿ ಪ್ರಜ್ಞೆ ತನ್ನ ನಿಜರೂಪವನ್ನು ಪಡೆಯುತ್ತದೆ. ಇದು, ಬಯಕೆ, ಭಾವನೆ ಮತ್ತು ಅಹಂಕಾರದ ವೃತ್ತಗಳಿಗೆ ಅತೀತವಾದ ಪರಮಸತ್ಯದ ಲೋಕ. ಇಲ್ಲಿ ನಾವು ಸೂಕ್ಷ್ಮ ಸಾರೂಪ್ಯತೆಯ ಅನೇಕ ಹಂತಗಳನ್ನು ಹಾದುಹೋಗುತ್ತ, ಅನಸ್ತಿತ್ವದೆಡೆಗೆ ಸಾಗುತ್ತೇವೆ. ಕೇಂದ್ರ ಮಂಡಲ ಆರಂಭವಾಗುವುದು ಸ್ವಯಂಚಾಲನೆಯ ಹಂತದಲ್ಲಿ, ಅಂದರೆ ಎಲ್ಲವೂ ಸ್ವಯಂಚಾಲಿತವಾಗಿ ನಡೆಯುತ್ತಿದೆಯೆಂಬ ಸೂಕ್ಷ್ಮ ಪರಿಜ್ಞಾನ. ಯಾವ ಕ್ರಿಯೆಯಲ್ಲೂ 'ಕರ್ತೃತ್ವ' ಭಾವವಿರದು. ಪ್ರಯತ್ನರಹಿತವಾದ ಈ ಸ್ವಯಂಚಾಲನೆಯು ಪ್ರಕೃತಿಯೊಂದಿಗೆ ಸಮರಸವಾಗಿರುತ್ತದೆ.



ಸಾಮಾನ್ಯವಾಗಿ, ಪ್ರಗತಿಯ ಸೋಪಾನ ಹೀಗಿರುತ್ತದೆ: ಒಲವಿನಿಂದ ವಾತ್ಸಲ್ಯ, ಅಲ್ಲಿಂದ ಪ್ರೇಮ, ನಂತರ ಶ್ರದ್ಧೆ.

ಮುಂದಿನ ಹಂತದಲ್ಲಿ, ಸ್ವಯಂಚಾಲನೆಯ ಭಾವವೂ ಮಾಯವಾಗುತ್ತದೆ. ಇದನ್ನು ಅರ್ಥೈಸಿಕೊಳ್ಳುವ ಸುಲಭ ಮಾರ್ಗವೆಂದರೆ, ದೈನಂದಿನ ಕೆಲಸಗಳನ್ನು ಮಾಡುತ್ತಲೇ ಗಾಢ ನಿದ್ರೆಯಲ್ಲಿರುವುದನ್ನು ಕಲ್ಪಿಸಿಕೊಳ್ಳಿ. ಈ ಅರಿವಿಲ್ಲದ ಸ್ಥಿತಿಯಲ್ಲಿ ಕ್ರಿಯೆಗಳು ಯಾವ ಮುದ್ರೆಯನ್ನೂ ಉಳಿಸುವುದಿಲ್ಲ. ಮಾನಸಿಕ ಸ್ತರದಲ್ಲಿ ಯಾವುದೇ ವಿಚಾರ ಅಥವಾ ಕ್ರಿಯೆಯ ಕೈವಾಡವಿರುವುದಿಲ್ಲ.

ಮುಂದೆ, ಪ್ರೇಮಕಿರಣವು ನಮ್ಮನ್ನು ಕೇಂದ್ರದ ಮತ್ತಷ್ಟು ಸಮೀಪಕ್ಕೆ ಒಯ್ದಾಗ, ಅರಿವಿಲ್ಲದ ಸ್ಥಿತಿ ಇನ್ನಷ್ಟು ಪರಿಷ್ಕೃತವಾಗಿ ಪರಿಶುದ್ಧ ಸಾರೂಪ್ಯತೆಯಾಗುತ್ತದೆ. ಎಲ್ಲ ಇತಿಮಿತಿಗಳೂ ಇಲ್ಲವಾಗುತ್ತವೆ; ಆದರೆ ಇದೇ ಕೊನೆಯಲ್ಲ. ಅದರಲ್ಲಿನ್ನೂ ಸುಪ್ತ ಚಲನೆ ಇದೆ.

ನಂತರ ನಾವು ಕೇಂದ್ರದೆಡೆಗೆ ಈಜುತ್ತಲೇ ಇರುತ್ತೇವೆ. ಬಾಬೂಜಿಯವರು ಕೇಂದ್ರವನ್ನು ಚಲನರಹಿತ ಮತ್ತು "ಸ್ವಯಂ-ಅನಂತ"ವೆಂದು ಹೇಳುತ್ತಾರೆ; ಇಲ್ಲಿ ಪರಮ ವಿಸ್ಮಯ ಹಾಗು ಅದ್ಭುತಗಳ ಅನುಭವವಾಗುತ್ತದೆ. ಈ ಚಲನರಹಿತ ಕೇಂದ್ರವೇ ಇಡೀ ವಿಶ್ವಕ್ಕೆ ಕಾರಣವಾದ ಸುಪ್ತಚಲನೆಯನ್ನು ನಿರ್ವಹಿಸುತ್ತದೆ.

ಕೇಂದ್ರದಿಂದ ಹೊರಹೊಮ್ಮಿ, ಕೇಂದ್ರಮಂಡಲದ ಹೊರ ಅಂಚಿನವರೆಗೆ ಸಾಗಿ, ಒಂದು 'ವೃತ್ತ'ವನ್ನು ಸೃಷ್ಟಿಸುವ ಜ್ಯೋತಿಯನ್ನು ಬಾಬೂಜಿಯವರು ವರ್ಣಿಸುತ್ತಾರೆ. ಅವರು 'ಜ್ಯೋತಿ' ಎಂಬ ಶಬ್ದವನ್ನು ಬಳಸಿರುವರಾದರೂ, ಅದನ್ನು ವರ್ಣಿಸಲು ಸೂಕ್ತ ಶಬ್ದವಿಲ್ಲವೆಂದೂ ಹೇಳುತ್ತಾರೆ. ಪ್ರಾಯಶಃ ಕೇಂದ್ರಮಂಡಲದ ಏಳು ವೃತ್ತಗಳಿಗೆ 'ಜ್ಯೋತಿರ್ಮಯ ವೃತ್ತಗಳು' ಎಂಬ ಹೆಸರು ಬರಲು ಇದೇ ಜ್ಯೋತಿ ಕಾರಣವಾಗಿರಬಹುದು. ನಿಮಗೆ ಏನನ್ನಿಸುತ್ತದೆ? ನಾವು ಆ ವೃತ್ತವನ್ನು ದಾಟಿ ಕೇಂದ್ರಮಂಡಲಕ್ಕೆ ಹೋಗಲು ಇರುವ ಏಕೈಕ ಮಾರ್ಗವೆಂದರೆ ಪ್ರೇಮಕಿರಣ, ಮತ್ತು ಅದಕ್ಕಾಗಿ ಗುರುಗಳ ಮೇಲಿನ ಸಂಪೂರ್ಣ ಅವಲಂಬನೆಯ ಅಗತ್ಯವಿದೆಯೆಂಬುದಷ್ಟೇ ನಮಗೆ ತಿಳಿದಿದೆ.

ಹೃತ್ಪೂರ್ವಕ ಪ್ರಾರ್ಥನೆಗಳೊಂದಿಗೆ,

ಕಮಲೇಶ್
ಕಾನ್ಹಾ ಶಾಂತಿವನಂ

ಶ್ರೀ ಕಮಲೇಶ್ ಪಟೇಲ್‌ರವರ
66ನೇ ಜನ್ಮದಿನೋತ್ಸವದ ಅಂಗವಾಗಿ ನೀಡಿದ ಸಂದೇಶ
28 ಸೆಪ್ಟೆಂಬರ್ 2021

heartfulness
advancing in love

